## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಜೆಎಂಎಫ್‌ಸಿ ನ್ಯಾಯಾಲಯ, ಕೆಜಿಎಫ್

## ಸಿ.ಸಿ.ನಂ.373/2023

ಚಾಸಾ: 9 ಪ್ರಾಸಾ:4

ದಿನಾಂಕಃ 28.10.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು– | ಶಾಂತಕುಮಾರ್ |
| ತಂದೆಯ ಹೆಸರು– | ಲೂರ್ದುನಾಥನ್ |
| ವಯಸ್ಸು – | 56 ವರ್ಷ |
| ಉದ್ಯೋಗ– | ಖಾಸಗಿ ಕೆಲಸ |
| ವಾಸ– | ಕೆಜಿಎಫ್ |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

**1.** ಚಾಸಾ–**1** ಮತ್ತು **8** ನನಗೆ ಗೊತ್ತಿಲ್ಲ. ನ್ಯಾಯಾಲಯ ಮುಂದೆ ಇರುವ ಆರೋಪಿ ನನಗೆ ಗೊತ್ತಿಲ್ಲ. ನಿಪಿ–**3** ರಲ್ಲಿ ಇರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಒಪ್ಪಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ–**3**(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ಕಳೆದ ಎರಡು ವರ್ಷಗಳ ಹಿಂದೆ ಪೋಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ನಿಪಿ–**3** ರಲ್ಲಿ ಬರೆದಿರುವ ವಿಷಯಗಳ ಬಗ್ಗೆ ನನಗೆ ಏನು ಗೊತ್ತಿಲ್ಲ. ಯಾವ ವಿಷಯಕ್ಕೆ ಸಂಬಂಧಿಸಿದಂತೆ ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪೋಲೀಸರು ನನ್ನ ಸಮಕ್ಷಮ ಯಾವುದೇ ವಿದ್ಯುತ್ ನಿರಾಕ್ಷೇಪಣಾ ಪತ್ರವನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ನಿಪಿ–**63** ರಿಂದ **66** ದಾಖಲೆಗಳನ್ನು ಸಾಕ್ಷಿ ನೋಡಿ ಗುರುತಿಸಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃಮಾನ್ಯ ಎಪಿಪಿ ರವರಿಂದಃ**

2. ದಿನಾಂಕ 09.07.2019 ರಂದು ರಾಬರ್ಟ್ ಸನ್ ಪೇಟೆ ಪೋಲೀಸ್ ಠಾಣೆಯಲ್ಲಿ ಚಾಸಾ1 ಮತ್ತು 8 ರವರ ಸಮಕ್ಷಮ ಮಧ್ಯಾಹ್ನ 12.00 ಗಂಟೆಯಿಂದ 1.45 ಗಂಟೆಯವರೆಗೆ ನಿಪಿ–3 ರಂತೆ ಮುದ್ರಿತ ಪೌರಾಯುಕ್ತರ ಸಹಿ ಮತ್ತು ಸೀಲು ಇರುವ ವಿದ್ಯುತ್ ನಿರಾಕ್ಷೇಪಣಾ ಪತರವನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸುಳ್ಳು. ಅದೇ ರೀತಿ ಅದೇ ದಿನಾಂಕದಂದು ಈಗ ಓದಿ ಹೇಳಿದ ಹಾಗೆ ಪೋಲೀಸಿನವರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದರೆ ಸುಳ್ಳು. ಸದರಿ ಹೇಳಿಕೆ ನಿಪಿ–67 ಎಂದು ಗುರುತಿಸಲಾಯಿತು. ನಿಪಿ–3 ಮತ್ತು 67 ರಲ್ಲಿ

ಬರೆದಿರುವ ಅಂಶಗಳು ನನಗೆ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಸಲುವಾಗಿ ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ವಕೀಲರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಜಯಲಕ್ಷ್ಮೀ ಎನ್.ಬಿ)
ಹಿರಿಯ ಸಿ.ಜೆ. ಮತ್ತು ಪ್ರಧಾನ ಜೆಎಂಎಫ್‌ಸಿ
ಕೆಜಿಎಫ್